ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ ದಿನಾಂಕ : DATE : 15/08/2019

**ಏಕಾಂಗಿ** ಎಸ್‌ಡಿಎಫ್‌ನ ಮತ್ತಿಬ್ಬರು ಪಕ್ಷಾಂತರ

# 26 ವರ್ಷ ಸಿಕ್ಕಿಂ ಆಳಿದ್ದ ಪಕ್ಷ 2 ದಿನದಲ್ಲಿ ಖಾಲಿ ಖಾಲಿ!

ಕ.ಪ್ರ 15/8/19



- 10 ಶಾಸಕರು ಮಂಗಳವಾರ ದೆಹಲಿಯಲ್ಲಿ ಬಿಜೆಪಿ ಸೇರಿದ್ದರು
- ಪಕ್ಷದಲ್ಲಿ ಈಗ ಮಾಜಿ ಸಿಎಂ ಚಾಮ್ಲಿಂಗ್ ಮಾತ್ರವೇ ಬಾಕಿ

**ಗ್ಯಾಂಗ್ಟಕ್:** ಸಿಕ್ಕಿಂ ಎಂಬ ಈಶಾನ್ಯದ ಪುಟ್ಟ ರಾಜ್ಯವನ್ನು ಬರೋಬ್ಬರಿ ಎರಡೂವರೆ ದಶಕಗಳ ಕಾಲ ಆಳಿದ್ದ ಸಿಕ್ಕಿಂ ಡೆಮೊಕ್ರಾಟಿಕ್ ಫ್ರಂಟ್ ಕೇವಲ 2 ದಿನದಲ್ಲಿ ಖಾಲಿ ಖಾಲಿಯಾಗಿದೆ.

ಮಂಗಳವಾರಷ್ಟೇ ಪಕ್ಷದ 10 ಜನ ಶಾಸಕರು ಬಿಜೆಪಿ ಸೇರಿದ್ದರು. ಇದಾದ ಮರುದಿನವೇ 2 ಶಾಸಕರು ಪಕ್ಷ ತೊರೆದಿದ್ದು, ಆಡಳಿತಾರೂಢ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ ಪಕ್ಷಕ್ಕೆ ಸೇರಿದ್ದಾರೆ. ಅಲ್ಲಿಗೆ 13 ಶಾಸಕರ ಪೈಕಿ 12 ಮಂದಿ ಗುಳೆ ಹೋಗಿದ್ದು, ಪಕ್ಷದ ಅಧ್ಯಕ್ಷ ಹಾಗೂ 26 ವರ್ಷ ಸಿಕ್ಕಿಂನ ಮುಖ್ಯಮಂತ್ರಿಯಾಗಿದ್ದ ಪವನ್ ಕುಮಾರ್ ಚಾಮ್ಲಿಂಗ್ ಮಾತ್ರ ಪಕ್ಷದಲ್ಲಿ ಬಾಕಿಯಾಗಿದ್ದಾರೆ. 32 ಸಂಖ್ಯಾಬಲದ ಸಿಕ್ಕಿಂ ವಿಧಾನಸಭೆಗೆ, ಕಳೆದ ಮೇನಲ್ಲಿ ನಡೆದ ಚುನಾವಣೆಯಲ್ಲಿ ಎಸ್‌ಕೆಎಂ 17, ಎಸ್‌ಡಿಎಫ್ 15 ಸ್ಥಾನ ಗೆದ್ದಿದ್ದವು. ಎಸ್‌ಡಿಎಫ್‌ನ ಇಬ್ಬರು ತಲಾ 2 ಕ್ಷೇತ್ರಗಳಲ್ಲಿ ಗೆದ್ದಿದ್ದರಿಂದ ರಾಜೀನಾಮೆ ನೀಡಿದ್ದರು. ಹಾಗಾಗಿ ಎಸ್‌ಕೆಎಂ ಬಲ 13ಕ್ಕೆ ಕುಸಿದಿತ್ತು.

7